ಕರ್ನಾಟಕ ಸರ್ಕಾರ

**ರಾಷ್ಟ್ರೀಯ ಆರೋಗ್ಯ ಅಭಿಯಾನ**

ರಾಜ್ಯ ಪಿ.ಸಿ&ಪಿ.ಎನ್.ಡಿ.ಟಿ, ಕೋಶ, 2ನೇ ಮಹಡಿ, ಐ.ಪಿ.ಪಿ. ಬ್ಲಾಕ್,
ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆನಂದರಾವ್‌ವೃತ್ತ, ಬೆಂಗಳೂರು –560009

Website: www.karhfw.gov.in

Tele Phone no: 080-22341996
E-mail Id: ddpcpndtkar@gmail.com

ಸಂಖ್ಯೆ: ಡಿ.ಡಿ/ಪಿ.ಸಿ&ಪಿ.ಎನ್.ಡಿ.ಟಿ/172/2016–17

ದಿನಾಂಕ: 28–03–2017

## ಅಧಿಕೃತ ಜ್ಞಾಪನಾ ಪತ್ರ

ವಿಷಯ: ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: Additional Chief Secretary, Govt. of Maharastra letter no: VIP-2017/C.R.192/F&W, dated: 09-03-2017

* * * *

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದಂತೆ, ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವಂತಹ ಬೆಳಗಾವಿ, ವಿಜಯಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಮಹಾರಾಷ್ಟ್ರ ಜಿಲ್ಲೆಯಿಂದ ಗರ್ಭಿಣಿಯರು ಪ್ರಸವಪೂರ್ವ ಲಿಂಗ ಪತ್ತೆಗಾಗಿ ಆಗಮಿಸುತ್ತಾರೆಂದು ಮತ್ತು ಮಹಾರಾಷ್ಟ್ರದ ಮೈಶಾಳ ಗ್ರಾಮ, ಮೀರಜ್ ತಾಲ್ಲೂಕು ಮತ್ತು ಸಾಂಗ್ಲಿ ಜಿಲ್ಲೆಯಲ್ಲಿ ಮಾರ್ಚ್ 01, 2017 ರಲ್ಲಿ ಒಂದು ಅಕ್ರಮ ಗರ್ಭಪಾತದಿಂದ ಮರಣ ಉಂಟಾಗಿದ್ದು, ಸದರಿ ಪ್ರಕರಣದಲ್ಲಿ ಮಹಾರಾಷ್ಟ್ರದ ಗಡಿಭಾಗಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಜಿಲ್ಲೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿಕೊಂಡಿರುತ್ತಾರೆ ಎಂಬ ಗುಮಾನಿ ಇರುತ್ತದೆ ಎಂದು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ. ಆದುದರಿಂದ ಎಂ.ಟಿ.ಪಿ. ಕಾಯ್ದೆಯನ್ನು ಮತ್ತು ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯನ್ನು ಹಿಂದೆಂದಿಗಿಂತಲೂ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕಾದ ಅವಶ್ಯಕತೆ ಇರುತ್ತದೆ. ಈ ವಿಷಯವಾಗಿ ಕೂಡಲೇ ಸದರಿ ನಾಲ್ಕು ಜಿಲ್ಲೆಗಳಲ್ಲಿ ನೊಂದಾಯಿತ/ ನೊಂದಾಯಿತವಲ್ಲದ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಸಮರೋಪಾದಿಯಲ್ಲಿ ಪರಿಶೀಲನೆ ಮಾಡಿ ಕಾನೂನು ರೀತಿಯ ಕ್ರಮಜರುಗಿಸಲು ಸೂಚಿಸಿದೆ. ಅವಶ್ಯಕತೆ ಇದ್ದಲ್ಲಿ ಮಹಾರಾಷ್ಟ್ರ ನೊಂದಣಿ ಇರುವ ವಾಹನಗಳು ಕರ್ನಾಟಕ ಗಡಿಭಾಗದ ಜಿಲ್ಲೆಗಳಿಗೆ ಅವೇಳೆಯಲ್ಲಿ ಸ್ತ್ರೀಯರನ್ನು ತುಂಬಿಸಿಕೊಂಡು ಬರುತ್ತಿದ್ದಲ್ಲಿ ನಿಗಾ ಇಡಲು ಸಂಬಂಧಪಟ್ಟ ಆರ್.ಟಿ.ಓ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಲು ಸೂಚಿಸಿದೆ. ಸಂಶಯ ಇರುವಂತಹ ಸ್ಕ್ಯಾನಿಂಗ್ ಸೆಂಟರ್‌ಗಳ ವೈದ್ಯರುಗಳ ಸಿ.ಡಿ.ಆರ್ ಕೂಡ ಪಡೆದು ತನಿಖೆ ಮಾಡಲು ಸೂಚಿಸಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ನಿಗಾ ಇಡುವುದು. ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಗ್ರಾಮದ ಇತರೇ ಇಲಾಖೆಯ ಅಧಿಕಾರಿಗಳು ಈ ರೀತಿಯ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ಇಡಲು ಅನುಕೂಲವಾಗುವಂತೆ ಆರೋಗ್ಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಭೆ ನಡೆಸಿ ಮಾಹಿತಿ ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಗಳಿಗೆ ಸೂಚನೆ ನೀಡುವುದು ಮತ್ತು ಈ ರೀತಿಯ ಸಭೆಯನ್ನು ಎಲ್ಲ ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿಗಳು ನಡೆಸಿ ದಿನಾಂಕ: 31–03–2017 ರೊಳಗೆ ವರದಿ ನೀಡುವುದು.

ಪ್ರಮುಖವಾಗಿ ಕೂಡಲೇ ಕೆಳಗೆ ಕಾಣಿಸುವ

1) ಕರ್ನಾಟಕ ರಾಜ್ಯದ ವೆಬ್‌ಸೈಟ್: www.pcpndtkar.in/index.php/complaints ಮತ್ತು ಟೋಲ್ ಫ್ರೀ ಸಂಖ್ಯೆ: "104".

. . . .2

2) ಮಹಾರಾಷ್ಟ್ರ ರಾಜ್ಯದ ಟೋಲ್ ಫ್ರೀ ಸಂಖ್ಯೆ: 1800–233–4475 ಮತ್ತು ವೆಬ್‌ಸೈಟ್ www.amchimulgi.gov.in .

ಇವುಗಳಿಗೆ ದಲ್ಲಾಳಿಯಾಗಿ ಕಾರ್ಯನಿರ್ವಹಿಸುತ್ತಿರುವವರು, ಅನಧಿಕೃತ ಸ್ಕ್ಯಾನಿಂಗ್ ಸೆಂಟರ್‌ಗಳು, ಪೋರ್ಟ್‌ಬೇಲ್ ಸ್ಕ್ಯಾನಿಂಗ್ ಮೆಷಿನ್ ಅನ್ನು ತಂದು ಸ್ಕ್ಯಾನಿಂಗ್ ಮಾಡುವವರು ಇವುಗಳ ಮಾಹಿತಿ ನೀಡಲು ಸ್ಥಳೀಯ ಟಿ.ವಿ. ಚಾನೆಲ್‌ಗಳಲ್ಲಿ, ಕೇಬಲ್ ನೆಟ್‌ವರ್ಕ್‌ಗಳಲ್ಲಿ, ಪತ್ರಿಕಾ ಮಾಧ್ಯಮಗಳಲ್ಲಿ, ಎಫ್.ಎಂ. ಚಾನೆಲ್‌ಗಳಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲು ಸೂಚಿಸಿದೆ.

ಆಯುಕ್ತರು 21.3.17
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಳಗಾವಿ, ವಿಜಯಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆ.
2) ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳು, ಬೆಳಗಾವಿ, ವಿಜಯಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆ.

**ಪ್ರತಿಯನ್ನು ಗೌರವ ಪೂರ್ವಕ ಮಾಹಿತಿಗಾಗಿ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ ರವರು ಸದರಿ ಮಾಹಿತಿಯನ್ನು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಗಮನಕ್ಕೆ ತರಲು ಕೋರಲಾಗಿದೆ.
2) ಜಿಲ್ಲಾ ಸಕ್ಷಮ ಪ್ರಾಧಿಕಾರಿ (ಪಿ.ಸಿ&ಪಿ.ಎನ್.ಡಿ.ಟಿ ಕಾಯ್ದೆ), ಬೆಳಗಾವಿ, ವಿಜಯಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆ.
3) ಕಛೇರಿ ಪ್ರತಿ.